


### ಅರ್ಥ ಇಲ್ಲ, ಮಾಧುರ್ಯ ಇಲ್ಲ

ಸೆ. 6ರ 'ಸುಧಾ' ಮುಖಪುಟ ಲೇಖನದಲ್ಲಿ ಬಿ.ಎಂ. ಹನೀಫ್ ಅವರು 'ಧಡಕ್, ಧಡಕ್ ಈ ಸಿನಿಮಾ ಗಾನ'ದ ಕುರಿತು ಚೆನ್ನಾಗಿ ವಿಶ್ಲೇಷಿಸಿದ್ದಾರೆ. ಇತ್ತೀಚಿನ ಹಾಡುಗಳಲ್ಲಿ ಕೆಲವೊಂದಕ್ಕೆ ಅರ್ಥವೂ ಇಲ್ಲ, ಮಾಧುರ್ಯವೂ ಇಲ್ಲ, ಹೃದಯ ತಣಿಸುವ ಸತ್ವವೂ ಇಲ್ಲ. ಆದರೂ ಆಗೊಮ್ಮೆ, ಈಗೊಮ್ಮೆ ಹೃದಯ ಕಲಕುವ, ಆನಂದದಲ್ಲಿ ಕುಣಿಸುವ ಹಾಡುಗಳು ಕೇಳಿ ಬರುತ್ತಿವೆ.

-ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ/ಸು.ವಿಜಯಲಕ್ಷ್ಮಿ, ಶಿವಮೊಗ್ಗ/ ವಿಜಯಕುಮಾರ್ ಜೈನ್, ಹರಪನಹಳ್ಳಿ/ಶ್ರೀನಾಥ ಕೊನೇಟಿ, ಸುಂದರ್, ನಾ.ರಾ.ಜ್ಯೋತಿ, ವೈ.ಎಸ್.ನಾಗರಾಜ, ಬೆಂಗಳೂರು/ದೇವಿದಾಸ ಸುವರ್ಣ, ಅಂಕೋಲಾ/ಎಚ್.ಆರ್.ದೇಸಾಯಿ, ರಾಯಚೂರು/ರಾಘವೇಂದ್ರ ಜೋಯ್ಸ್, ಮೈಸೂರು/ ಜಾಹ್ನವಿ ಭಾರದ್ವಾಜ್, ಕೆ.ಆರ್.ನಗರ

### ಅರೆಬರೆ ಬಟ್ಟೆಯ ಚಿತ್ರ ಅಗತ್ಯ ಇರಲಿಲ್ಲ

ಮನೆ ಮಂದಿಯೆಲ್ಲ ಇಷ್ಟಪಟ್ಟು ಓದುವ ನೆಚ್ಚಿನ 'ಸುಧಾ' ಪತ್ರಿಕೆಯಲ್ಲಿ ಅರೆಬರೆ ಬಟ್ಟೆ ತೊಟ್ಟ ಹೆಣ್ಣಿನ ಚಿತ್ರ ಮುಖಪುಟದಲ್ಲಿ ಮೂಡಿ ಬಂದಿರುವುದು ಪತ್ರಿಕೆಗೆ ಶೋಭೆ ತರುವಂತದ್ದಲ್ಲ, ಅದರ ಅಗತ್ಯವೂ ಇರಲಿಲ್ಲ.

- 'ಸವಿ', ತುಮಕೂರು/ ಪ್ರಿಯದರ್ಶಿನಿ ಎಸ್.ಭಟ್, ಹೊನ್ನಾವರ/ ಸರನಾಡಗೌಡರ್ ಶೇಖರಗೌಡರ್, ಧಾರವಾಡ/ ಜಾನಕಿರಾವ್, ಮಾಲತಿ ಪುರುಷೋತ್ತಮ, ಬೆಂಗಳೂರು/ ಬಾಳ್ಳುಪೇಟೆ ನೀಲಕಂಠಪ್ಪ, ಹಾಸನ/ ಎಂ.ರವೀಂದ್ರ ನಾಯಕ್, ಪರ್ಕಳ/ ಪಂಕಜ ನಾಗರಾಜ, ತುಮಕೂರು/ ನೇಗೋಭ, ಕುಕ್ಕೆ ಸುಬ್ರಮಣ್ಯ/ ಬಿದರಹಳ್ಳಿ ಕೃಷ್ಣಮೂರ್ತಿ, ಮಲ್ಲಾಡಿಹಳ್ಳಿ/ ಸಿದ್ದಲಿಂಗೇಗೌಡ, ಮಾವಿನಕೆರೆ

### 'ಸುಧಾ'ಕ್ಕೆ ಅನಿವಾರ್ಯವಲ್ಲ

ಮುಖಪುಟ ಹಾಗೂ ಒಳಪುಟಗಳಲ್ಲಿ ಆಗಾಗ ಕಾಮೋದ್ರೇಕದ ಚಿತ್ರಗಳನ್ನು ಪ್ರಕಟಿಸುವುದು 'ಸುಧಾ'ಕ್ಕೆ ಅನಿವಾರ್ಯವೇನಲ್ಲ.

-ಗೌರಿಬಿದನೂರು ರಂಗಪ್ಪ, ಬೆಂಗಳೂರು

### ಅಣಬೆ ಗೀತೆಗಳು!

ಮಳೆಗಾಲದಲ್ಲಿ ಅಲ್ಲಲ್ಲಿ ಹುಟ್ಟಿ ಮಾಯವಾಗುವ ಅಣಬೆಗಳಂತೆ ಈಗಿನ ಧಡಕ್ ಧಡಕ್ ಚಿತ್ರಗೀತೆಗಳು. ಆದರೆ ಹಿಂದಿನ ಮಧುರ ಗೀತೆಗಳು ಎಷ್ಟೇ ವರ್ಷಗಳಾದರೂ ತೆಂಗು, ಹಲಸಿನ ಮರಗಳಂತೆ ಮನಸ್ಸನ್ನು, ಹೃದಯವನ್ನು ತುಂಬುತ್ತವೆ.

-ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ

### 'ಚದುರಿದ' ಅಲ್ಲ 'ಚಲಿಸುವ'

ಡಾ. ರಾಜ್‌ಕುಮಾರ್ ಅವರ 'ಚಲಿಸುವ ಮೋಡಗಳು' ಚಿತ್ರದ ಹೆಸರು 'ಚದುರಿದ ಮೋಡಗಳು' ಎಂದಾಗಿರುವುದು ಅನಿರೀಕ್ಷಿತ ಅಲ್ಲವೆ?

-ಡಾ. ವಿ.ಎಸ್. ಚರಣ್, ಮೈಸೂರು

### ಹೀಗೆ ಕೇಳಿ, ಹಾಗೆ ಮರೆಯಿರಿ

1960ರ ದಶಕದ ಯಾವ ಜನ್ಮದ ಮೈತ್ರಿ (ಗೌರಿ), ಬಿಂಕದ ಸಿಂಗಾರಿ (ಕನ್ಯಾರತ್ನ), ಒಲವಿನ ಪ್ರಿಯಲತೆ (ಕುಲವಧು), ಕನಸೊಂದು ಕಂಡೆ ಕನ್ನಡ ಮಾತೆ (ನಂದಾ ದೀಪ)- ಗೀತೆಗಳು ಇಂದಿಗೂ ಮನಸ್ಸಿನಲ್ಲಿ ಉಳಿದಿವೆ. ಆದರೆ 'ಧಡಕ್' ಗೀತೆಗಳನ್ನು ಜನ ಹೀಗೆ ಕೇಳಿ ಹಾಗೆ ಮರೆಯುತ್ತಾರೆ!

-ಬಿ.ಎಸ್. ರಮೇಶ್, ಬೆಂಗಳೂರು

### ಬಾಂಬ್ ಸ್ಫೋಟದ ಹಾಡು

ಪ್ರಸ್ತುತ 'ಧಡಕ್-ಧಡಕ್' ಸಿನಿಮಾ ಹಾಡು ಚಲಾವಣೆಯಲ್ಲಿವೆ. ಮುಂದೆ 'ಬಾಂಬ್ ಸ್ಫೋಟ'ದಂತಹ ವಿಶಿಷ್ಟ ಹಾಡು ಚಲಾವಣೆಗೆ ಬರಲಿವೆ!

-ಕೋಟೇಶ್ವರ ಸೂರ್ಯನಾರಾಯಣ ರಾವ್, ಬೆಂಗಳೂರು

### ಹೊಟ್ಟೆ ಸಿಟ್ಟು ರಟ್ಟೆಯಲ್ಲಿಲ್ಲ!

ಎದೆ ಒಡೆಯುವಂತಹ ಇಂದಿನ ಹಾಡುಗಳನ್ನು ಕೇಳಿ ಕೇಳಿ ಸಾಕಾಗಿ ಇವುಗಳನ್ನು ಯಾರಾದರೂ ಯಾಕೆ ನಿಯಂತ್ರಿಸಬಾರದು? ಎನ್ನಿಸುತ್ತದೆ. ನಾನಿರುವ ಕುಗ್ರಾಮದಲ್ಲಿ ಕೂಡಾ ರಣವಾದ್ಯದ ಹಾಡುಗಳನ್ನು ಕೇಳಿ ರೋಷ ಉಕ್ಕುತ್ತದೆ. ಆದರೆ ಏನು ಮಾಡುವದು? ಹೊಟ್ಟೆಯಲ್ಲಿನ ಸಿಟ್ಟು ರಟ್ಟೆಯಲ್ಲಿಲ್ಲ.

-ಡಾ. ಮಲ್ಲಿಕಾರ್ಜುನ ಕುಂಬಾರ, ರಾಜೂರ

### ಖರ್ಚೆಷ್ಟು ಬರುತ್ತೆ?

'ನನ್ನ ಆಪರೇಷನ್' ಬರಹದಲ್ಲಿ ಎಚ್.ಗುಂಡೂರಾವ್ ಅವರು ಸಾಮಾನ್ಯ ಓದುಗನಿಗೂ ಅರ್ಥ ಆಗುವಂತೆ ಆಂಜಿಯೋಗ್ರಾಮ್, ಆಂಜಿಯೋಪ್ಲಾಸ್ಟಿ ಆಪರೇಷನ್ ಬಗ್ಗೆ ಧೈರ್ಯಗೆಡದಂತೆ ಸರಳವಾಗಿ ವಿವರಿಸಿದ್ದಾರೆ! ಆದರೆ ಇವಕ್ಕೆ ಎಷ್ಟು ಖರ್ಚು ಬರುತ್ತದೆ, ಮಾಹಿತಿ ಬೇಕಿತ್ತು.

-ನಾರಾಯಣ ಯಾಜಿ, ಶಿರಾಲಿ

### ಐತಿಹಾಸಿಕ ಮನೆ

ಬಿ.ವಿ.ಕಾರಂತರು ಹುಟ್ಟಿದ ಮನೆಯ ಐತಿಹಾಸಿಕ ವಿವರಣೆ ಮನೋಜ್ಞವಾಗಿತ್ತು.

-ಉಷೆ ಉದಯ್ ಪಡುಬಿದ್ರೆ, ಹೆಜ್ಮಾಡಿ

### ವರ್ಣನಾತೀತ

ವಂಡರ್ ಪುಟದಲ್ಲಿ ಮೂಡಿಬಂದ ವಿದ್ಯಾ ವಿ. ಹಾಲಭಾವಿ ಅವರ 'ಏಕ ಚಕ್ರಾಧಿಪತಿ' ಚಿತ್ರಬರಹ ಬರಹ ವರ್ಣಾನಾತೀತ.

-ನಿತ್ಯ ಎಸ್., ಮೂಡಬಿದಿರೆ

### ರೋಮಾಂಚಕ ಅನುಭವ

ಹಳ್ಳಿಗಾಡಿನ ಸಣ್ಣ ರೈತನಾದ ನನ್ನಂಥವರಿಗೆ ಲಂಡನ್ ಪ್ರವಾಸ ಗಗನ ಕುಸುಮ. ಆದರೆ ಹತಾಶೆಯಾಗಲಿಲ್ಲ. 'ಸುಧಾ'ದಲ್ಲಿ ಎಸ್.ಉಷಾ ಅವರ ಲೇಖನವನ್ನು ಓದಿ ಚಿತ್ರಗಳನ್ನು ವೀಕ್ಷಣೆ ಮಾಡಿದ ಮೇಲೆ ಸ್ವತಃ ಲಂಡನ್ ಪ್ರವಾಸ ಕೈಗೊಂಡು ಕ್ಯೂ ಪಾರ್ಕನಲ್ಲಿ ಸುತ್ತಾಡಿ ಆನಂದಿಸಿದಷ್ಟೇ ರೋಚಕ ಅನುಭವವಾಯಿತು ಲೇಖನ.

-ಹೇಳಮಂ ಮಧ್ಯಸ್ಥ, ಫಲ್ಗುಣಿ/ ಎಚ್. ಆನಂದಕುಮಾರ್, ಚಿತ್ರದುರ್ಗ

### ಕಥೆ ಚೆನ್ನಾಗಿತ್ತು

'ಹೆದ್ದಾರಿಯಲ್ಲೊಂದು ಶವ' ಪದ್ಮಜಾ ಸುಂದರೇಶ್ ಅವರ ಪತ್ತೇದಾರಿ ಕಥೆ ಚೆನ್ನಾಗಿತ್ತು. ಚಿತ್ರ ಇನ್ನೂ ಚೆನ್ನಾಗಿತ್ತು.

-ಬಿ.ಎಸ್. ಮುಳ್ಳೂರ, ಹಲಗತ್ತಿ

### ವಿಶೇಷ ಇಲ್ಲದ ಕಥೆ


ಪತ್ತೇದಾರಿ ಕಥೆ ಅನಿಸಲಿಲ್ಲ. ಅಂತಹ ವಿಶೇಷ ಇರಲಿಲ್ಲ.

-ರಾಜಶೇಖರ ಹಾದಿಮನಿ, ಧಾರವಾಡ

### ಹೃದಯ ಸ್ಪರ್ಶಿ ಕಥೆ

ಆಗಸ್ಟ್ 30ರ ಸಂಚಿಕೆಯ ದಯಾನಂದ ಪಿ. ಕಾಂಬಳೆ ಅವರ 'ಆಕೆ' ಕಥೆ ನಿಜಕ್ಕೂ ಹೃದಯ ಸ್ಪರ್ಶಿಯಾಗಿದೆ. ಕಥಾ ನಿರೂಪಣೆ ಚೆನ್ನಾಗಿದೆ.

-ಹಂಸಗೀತೆ, ಮುಧೋಳ/ ಗೋಪಾಲಕೃಷ್ಣ ನಾಯ್ಕ, ಕೋಕ್ರಿ ನಗರ







ಒಬ್ಬ 500 ರೂಪಾಯಿ, ಮತ್ತೊಬ್ಬ 750 ರೂಪಾಯಿ 'ಲಂಚ' ತೆಗೆದುಕೊಂಡಿದ್ದಂತೆ.. ಪಾಪ.. ಬಿಡಿ ಸ್ವಾಮಿ...